9) ಬೇವಿನಕೊಪ್ಪದಿಂದ ನೇಗಿನಾಳ ರಸ್ತೆ ಸುಧಾರಣೆ (7 ಕಿಮಿ 9.00 ಲಕ್ಷ)	ಸಂಖ್ಯೆ	-	1	-	-
10) ಕೆಂಗಾನೂರದಲ್ಲಿ ಸಮುದಾಯ ಭವನ ನಿರ್ಮಾಣ	ಸಂಖ್ಯೆ	-	1	-	-
		(ಬ) ಕಾಡಾ ಅನುದಾನದಲ್ಲಿ			
11) ಮುದ್ನೂರದಿಂದ ಜಾಲಿಕಟ್ಟೆ ರಸ್ತೆ ನಿರ್ಮಾಣ (1 ಕಿಮಿ 1.80 ಲಕ್ಷ)	ಸಂಖ್ಯೆ	1	-	-	-
12) ಸವದತ್ತಿಯಿಂದ ಸಂಗ್ರೇಶಕೊಪ್ಪ ರಸ್ತೆ ನಿರ್ಮಾಣ (1 ಕಿಮಿ 2.20 ಲಕ್ಷ)	ಸಂಖ್ಯೆ	1	-	-	-

---

ವಿಷಯ : ಪಂಚಾಯತ್ ಕಾನೂನಿನ್ವಯ ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ತರಬೇತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 428 (431)

ಶ್ರಿ. ಡಿ. ಆರ್ ಪಾಟೀಲ್ (ಗದಗ್):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೂತನ ಪಂಚಾಯತ್ ರಾಜ್ ಕಾನೂನಿನನ್ವಯ ಅಧಿಕಾರಕ್ಕೆ ಬಂದಿರುವ ಕೆಲವು ಜನ ಅಧ್ಯಕ್ಷ ಉಪಾಧ್ಯಕ್ಷರು ಅನಕ್ಷರಸ್ಥರಿದ್ದು, ಅವರಿಗೆಲ್ಲ ತಮ್ಮ ಅಧಿಕಾರ ಹಾಗೂ ಜವಾಬ್ದಾರಿಗಳನ್ನು ತಿಳಿಸಿಕೊಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಆ) ಪಂಚಾಯಿತಿಗಳ ನೂತನ ಸದಸ್ಯರಿಗೆ ಅವರ ಹೊಣೆಗಾರಿಕೆ ತಿಳಿಸಿಕೊಡಲು ಸರ್ಕಾರ ತರಬೇತಿ ನೀಡಲು ಕ್ರಮ ಕೈಗೊಂಡಿದೆಯೇ ಒಂದು ವೇಳೆ ಕ್ರಮ ಕೈಗೊಂಡಿರದಿದ್ದರೆ ಸರ್ಕಾರ ಈ ದಿಶೆಯಲ್ಲಿ ಯಾವ ಕ್ರಮ ಕೈಗೊಳ್ಳಲಿದೆ (ವಿವರಗಳನ್ನೊದಗಿಸುವುದು)

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ಹೊಸದಾಗಿ ಚುನಾಯಿತರಾಗಿ ಬಂದಿರುವ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಎಲ್ಲಾ ಜಿಲ್ಲಾ ಪಂಚಾಯತ್‌ಗಳು ತರಬೇತಿ ನಡೆಸಬೇಕೆಂದು ಸರ್ಕಾರ ತನ್ನ ದಿನಾಂಕ : 8-4-1994 ರ ಸುತ್ತೋಲೆಯಲ್ಲಿ ತಿಳಿಸಿದೆ.

ಆ) - ಈ ಪ್ರಕಾರ ಎಲ್ಲಾ ಜಿಲ್ಲಾ ಪಂಚಾಯ್ತಿಗಳು ತರಬೇತಿ ಶಿಬಿರಗಳನ್ನು ನಡೆಸುತ್ತಿವೆ.